<u>ಕರ್ನಾಟಕ ವಿಧಾನ ಪರಿಷತ್ತು</u>

ಸದಸ್ಯರ ಹೆಸರು : ಶ್ರೀ. ಲಹರ್‌ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: : 139

ಉತ್ತರ ದಿನಾಂಕ : 16.07.2019

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ 1600ಕ್ಕೂ ಅಧಿಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ 3191 ಗ್ರಾಮಗಳಲ್ಲಿ ಕುಡಿಯುವ ನೀರಿನ ತೀವ್ರವಾದ ಕೊರತೆ ಇರುತ್ತದೆ. |
| ಆ) | ಈ ಹಳ್ಳಿಗಳಿಗೆ ನೀರು ಪೂರೈಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ರಾಜ್ಯದಲ್ಲಿ ಒಟ್ಟು 162 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದ್ದು, ಬರಪೀಡಿತ ಪ್ರದೇಶಕ್ಕೆ ತುರ್ತು ಕುಡಿಯುವ ನೀರಿಗಾಗಿ ಇಲಾಖಾ ವತಿಯಿಂದ ಮುಂಗಾರಿನಲ್ಲಿ ಘೋಷಿಸಲಾದ 100 ತಾಲ್ಲೂಕುಗಳಿಗೆ ತಲಾ ರೂ.150.00ಲಕ್ಷಗಳಂತೆ, ಹಿಂಗಾರಿನಲ್ಲಿ ಘೋಷಿಸಲಾದ 62 ತಾಲ್ಲೂಕುಗಳಿಗೆ ತಲಾ ರೂ.75.00ಲಕ್ಷಗಳಂತೆ ಹಾಗು ಬರಪೀಡಿತವಲ್ಲದ 14 ತಾಲ್ಲೂಕುಗಳಿಗೆ ತಲಾ ರೂ.35.00ಲಕ್ಷಗಳ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. ಹಂಚಿಕೆ ಮಾಡಲಾದ ಒಟ್ಟು ರೂ.201.40ಕೋಟಿಗಳ ಪೈಕಿ ಅವಶ್ಯಕತೆಗೆ ತಕ್ಕಂತೆ ಇಲ್ಲಿಯವರೆಗೆ ರೂ.162.14ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ರೂ.120.04ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಒಟ್ಟು ಅನುಮೋದನೆಯಾದ 13464 ಕಾಮಗಾರಿಗಳ ಪೈಕಿ 12056 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ.<br><br>ಇದಲ್ಲದೇ, ರಾಜ್ಯದಲ್ಲಿ ಈಗ ಒಟ್ಟು 1488 ಗ್ರಾಮಗಳಲ್ಲಿ 2274 ಸಂಖ್ಯೆಯ ಟ್ಯಾಂಕರ್‌ಗಳ ಮೂಲಕ ಹಾಗು 1505 ಗ್ರಾಮಗಳಲ್ಲಿ 2324 ಸಂಖ್ಯೆಯ ಕೊಳವೆಬಾವಿಗಳನ್ನು ಬಾಡಿಗೆ ಪಡೆದು ನೀರು ಸರಬರಾಜು ಮಾಡಲಾಗುತ್ತಿದೆ. (ದಿನಾಂಕ:11.07.2019ರ ಮಾಹಿತಿಯಂತೆ)<br><br>2018-19ನೇ ಸಾಲಿನ ಬಜೆಟ್‌ನಲ್ಲಿ ರೂ.2200.00ಕೋಟಿಗಳ ಅನುದಾನ ನಿಗಧಿಪಡಿಸಲಾಗಿತ್ತು. ರೂ.59.70ಕೋಟಿಗಳ ವೆಚ್ಚದಲ್ಲಿ 448 ಸಂಖ್ಯೆಯ ಕೊಳವೆ ನೀರು ಸರಬರಾಜು ಯೋಜನೆ, ರೂ.1305.97ಕೋಟಿಗಳ ವೆಚ್ಚದಲ್ಲಿ 20 ಸಂಖ್ಯೆಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಹಾಗೂ ರೂ.283.08ಕೋಟಿಗಳ ವೆಚ್ಚದಲ್ಲಿ 4855 ಸಂಖ್ಯೆಯ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅನುಷ್ಠಾನಗೊಳಿಸಲಾಗಿದೆ. Support activities ಹಾಗು WQMSP ಕಾಮಗಾರಿಗಳನ್ನು ಸಹ ಕೈಗೊತ್ತಿಕೊಳ್ಳಲಾಗಿರುತ್ತದೆ. ಒಟ್ಟಾರೆಯಾಗಿ ರೂ.2886.18ಕೋಟಿಗಳ ವೆಚ್ಚದಲ್ಲಿ ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. |

| | | |
|---|---|---|
| | | ಮುಂದುವರೆದು, 2018–19ನೇ ಸಾಲಿನ ಬಜೆಟ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ರೂ.53000.00ಕೋಟಿಗಳ ಅಂದಾಜು ಮೊತ್ತದಲ್ಲಿ ಜಲಧಾರೆ ಯೋಜನೆಯನ್ನು ಕೈಗೊಳ್ಳುವುದಾಗಿ ಘೋಷಿಸಿರುತ್ತಾರೆ.<br><br>2019–20ನೇ ಸಾಲಿನಲ್ಲಿ ರೂ.3207.10ಕೋಟಿಗಳ ಅನುದಾನವನ್ನು (Including OB of Rs.411.52Cr) ನಿಗಧಿಪಡಿಸಲಾಗಿರುತ್ತದೆ. ಪ್ರಗತಿಯಲ್ಲಿರುವ 92 ಸಂಖ್ಯೆಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಪೈಕಿ 53 ಸಂಖ್ಯೆಯ ಯೋಜನೆಗಳನ್ನು ಈ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. 502 ಸಂಖ್ಯೆಯ ಕೊಳವೆ ನೀರು ಸರಬರಾಜು ಯೋಜನೆಗಳು ಹಾಗು 1 ಲಕ್ಷ ಸಂಖ್ಯೆಯ ನಳ ನೀರು ಸಂಪರ್ಕಗಳನ್ನು ಸದರಿ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಅಲ್ಲದೇ ಕರ್ನಾಟಕ ಸರ್ಕಾರವು ಮಳೆ ನೀರನ್ನು ವರ್ಧಿಸಲು ಮೋಡ ಬಿತ್ತನೆ ಕಾರ್ಯಾಚರಣೆಯನ್ನು ಹಮ್ಮಿಕೊಂಡಿರುತ್ತದೆ. 2019–20ನೇ ಸಾಲಿನ ಕ್ರಿಯಾ ಯೋಜನೆಯನ್ನು SLSSC ಸಭೆಯಲ್ಲಿ ಮಂಡಿಸಿ ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.<br><br>ಅಲ್ಲದೇ 2019–20ನೇ ಸಾಲಿನ ಬಜೆಟ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಜಲಧಾರೆ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು, ಮೊದಲ ಹಂತದಲ್ಲಿ ಅಂದಾಜು ಮೊತ್ತ ರೂ.4000.00ಕೋಟಿ ಮೊತ್ತದಲ್ಲಿ ಮಂಡ್ಯ, ರಾಯಚೂರು, ವಿಜಯಪುರ ಮತ್ತು ಕೋಲಾರ ಜಿಲ್ಲೆಗಳನ್ನು ಪರಿಗಣಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ Preliminary Scheme Report ತಯಾರಿಕ ಹಂತದಲ್ಲಿರುತ್ತದೆ. ಮುಂಬರುವ ವರ್ಷಗಳಲ್ಲಿ ಉಳಿದ ಜಿಲ್ಲೆಗಳನ್ನು ಜಲಧಾರೆ ಯೋಜನೆಯಲ್ಲಿ ಕೈಗೊಳ್ಳಲು ನಿಯಮಾನುಸಾರ ಕ್ರಮ ವಹಿಸಲಾಗುವುದು. |

ಸಂ:ಗ್ರಾಕುನೀ&ನೈಇ 81 ಗ್ರಾನೀಸ(3)2019

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೃಷ್ಣ ಬೈರೇಗೌಡ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್
ಸಚಿವರು